(ಅ) ಭದ್ರಾ ಮೇಲ್ದಂಡೆ ಯೋಜನೆಯು ತುಂಗಭದ್ರಾ ತಿರುವು ಯೋಜನೆ ಎಂಬ ನಾಮಾಂಕಿತದೊಡನೆ ಅನ್ವೇಷಣೆಯಲ್ಲಿದೆ.

(ಆ) ಯೋಜನೆಯ ಅನ್ವೇಷಣೆಯು ಪೂರ್ಣಗೊಂಡ ನಂತರ ವಿವರಗಳು ಲಭ್ಯವಾಗುವುವು.

(ಇ) -ಮೇಲಿನಂತೆ-

(ಈ) -ಮೇಲಿನಂತೆ-

ಪುತ್ತೂರು ತಾಲ್ಲೂಕಿನ ಕಡಬ ವಿದ್ಯುತ್ ಸಬ್-ಸ್ಟೇಷನ್ ನಿರ್ಮಾಣ

272 (414) ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುತ್ತೂರು ತಾಲ್ಲೂಕಿನ ಕಡಬ ವಿದ್ಯುತ್ ಸಬ್-ಸ್ಟೇಷನ್ ಕೆಲಸ ಕಾರ್ಯಗಳ ಕುಂಠಿತಗೊಳ್ಳಲು ಕಾರಣವೇನು;

(ಆ) ಯಾವಾಗ ಪೂರ್ತಿಗೊಂಡು ಕಾರ್ಯ ಪ್ರವೃತ್ತವಾಗುವುದು;

(ಇ) ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವ ಇಲಾಖೆ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ. ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

(ಅ) ಕಡಬದಲ್ಲಿ 33:11 ಕೆ.ವಿ. ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವು ಮುಕ್ತಾಯ ಹಂತದಲ್ಲಿದ್ದು, ಈ ಸ್ಟೇಷನ್ ಚಾಲನೆಗಾಗಿ ಸಿದ್ಧಗೊಳ್ಳುತ್ತಿದೆ.

ಈ ಸ್ಟೇಷನ್ನಿಗೆ ಸಂಬಂಧಿಸಿದ ಪುತ್ತೂರು ಕಡಬ 33 ಕೆವಿ ಲೈನಿನ ನಿರ್ಮಾಣ ಕಾರ್ಯದಲ್ಲಿ ಉಂಟಾದ ವಿಳಂಬಕ್ಕೆ ಮುಖ್ಯ ಕಾರಣ ಅರಣ್ಯ ಇಲಾಖೆಯಿಂದ ಸಕಾಲದಲ್ಲಿ ಅರಣ್ಯ ತೆರವುಗೆ (ಫಾರಸ್ಟ್ ಕ್ಲಿಯರೆನ್ಸ್) ದೊರಕದೇ ಇದ್ದುದಾಗಿದೆ. ಅರಣ್ಯ ತೆರವಿಗಾಗಿ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಫೆಬ್ರವರಿ 93ರಲ್ಲಿ ಸಲ್ಲಿಸಲಾಗಿತ್ತು. ಸುಧೀರ್ಘ ಪತ್ರ ವ್ಯವಹಾರ, ಚರ್ಚೆಗಳ ನಂತರ ಅಂತಿಮ ಅನುಮತಿ (ಕ್ಲಿಯರೆನ್ಸ್) ಅಕ್ಟೋಬರ್ 96 ರಲ್ಲಿ ದೊರಕಿತು.

(ಆ) ಬಾಕಿ ಉಳಿದ ಕಾರ್ಯಗಳನ್ನು ಪೂರ್ಣಗೊಳಿಸಿ ಈ ಸ್ಟೇಷನನ್ನು ಮಾರ್ಚ್ 97ರೊಳಗೆ ಕಾರ್ಯಾಚರಣೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

(ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ವಿಳಂಬವು ಮುಖ್ಯವಾಗಿ ಸಕಾಲದಲ್ಲಿ ಅರಣ್ಯ ತೆರವು (ಫಾರೆಸ್ಟ್ ಕ್ಲಿಯರೆನ್ಸ್) ದೊರಕದೇ ಇದ್ದುದರಿಂದಾಗಿದೆ. ಆದ್ದರಿಂದ, ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಪಡಿತರ ಕಾರ್ಡುಗಳ ವಿತರಣೆ

273 (413) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಸಿರು ಕಾರ್ಡಿನಲ್ಲಿ ಗುರುತಿಗಾಗಿ ಫೋಟೋ ಹಚ್ಚುವ ಸಂದರ್ಭದಲ್ಲಿ ಹಳೆ ಪಡಿತರ ಕಾರ್ಡಿನ ಬದಲು ಹೊಸ ಕಾರ್ಡುಗಳನ್ನು ಕೊಡುವ ಆಲೋಚನೆ ಸರ್ಕಾರಕ್ಕಿದೆಯೇ;

(ಆ) ಹೊಸ ಪಡಿತರ ಕಾರ್ಡುಗಳ ವಿತರಣೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು;

(ಇ) ಗ್ರಾಮಾಂತರ ಹಾಗೂ ಪಟ್ಟಣ ವಾಸಿಗಳಿಗೆ ಸರಿಸಮವಾಗಿ ರೇಷನ್ ಹಂಚುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

(ಅ) ಇಲ್ಲ ಈಗಿರುವ ಕಾರ್ಡಿನ ಮೇಲೆ ಫೋಟೋವನ್ನು ಅಂಟಿಸಲಾಗುವುದು.

(ಆ) ದಿನಾಂಕ 1-1-96 ರಲ್ಲಿರುವಂತೆ ರಾಜ್ಯದಲ್ಲಿರುವ ಕುಟುಂಬಗಳ ಸಂಖ್ಯೆ 100 ಲಕ್ಷಗಳು. ಇಲಾಖೆಯು 112 ಲಕ್ಷ ಕಾರ್ಡುಗಳನ್ನು ವಿತರಿಸಿದೆ. 12 ಲಕ್ಷ ಕಾರ್ಡುಗಳು ಹೆಚ್ಚಾಗಿ ಚಲಾವಣೆಯಲ್ಲಿವೆ. ಡಿಸೆಂಬರ್ 1996 ನೇ 2ನೇ ಭಾಗದಿಂದ ನಕಲಿ ಪಡಿತರ ಕಾರ್ಡುಗಳನ್ನು ತೆಗೆದುಹಾಕಲು ತೀವ್ರವಾದ ಕ್ರಮವನ್ನು ತೆಗೆದುಕೊಂಡಿದೆ. 1997 ನೇ ಮಾರ್ಚ್ ತಿಂಗಳ ವೇಳೆಗೆ ಈ ಕಾರ್ಯಕ್ರಮ ಮುಗಿಯಲಿದೆ. ಆದ್ದರಿಂದ ಹೊಸ ಪಡಿತರ ಕಾರ್ಡುಗಳನ್ನು ನೀಡುವುದನ್ನು ಈ ಅವಧಿಯಲ್ಲಿ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

(ಇ) ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಅಕ್ಕಿ ಮತ್ತು ಗೋಧಿಯನ್ನು ಕಾರ್ಡುದಾರರಿಗೆ ಸಮನಾಗಿ ನೀಡಲಾಗುತ್ತಿದೆ. ರಾಜ್ಯಕ್ಕೆ ನೀಡಲಾಗುತ್ತಿರುವ 19.140.3 ಮೆ. ಟನ್ ಸಕ್ಕರೆ ಹಾಗೂ 53.412 ಕೀ. ಲೀಟರ್ ಸೀಮೆಎಣ್ಣೆ ಬೇಡಿಕೆಗೆ ಅನುಗುಣವಾಗಿದೆ. ಸಾಲುತ್ತಿಲ್ಲವಾದ್ದರಿಂದ ಸಕ್ಕರೆ ಮತ್ತು ಸೀಮೆಎಣ್ಣೆ ನೀಡುವುದರಲ್ಲಿ ವ್ಯತ್ಯಾಸವಿದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಪ್ರತಿ ಕಾರ್ಡಿಗೆ 3 ಕೆ.ಜಿ. ಸಕ್ಕರೆ ಮತ್ತು 6 ಲೀಟರ್ ಸೀಮೆಎಣ್ಣೆಯಂತೆ ಸಮನಾಗಿ ಹಂಚಲು ಕೇಂದ್ರ ಸರ್ಕಾರವನ್ನು ರಾಜ್ಯಕ್ಕೆ ನೀಡುತ್ತಿರುವ 14,583 ಮೇ.ಟನ್ ಸಕ್ಕರೆ ಮತ್ತು 21,588 ಕೀ. ಲೀಟರ್ ಸೀಮೆಎಣ್ಣೆ ಪ್ರಮಾಣವನ್ನು ಹೆಚ್ಚಿಸಬೇಕೆಂದು ರಾಜ್ಯ ಸರ್ಕಾರವು ಮನವಿ ಮಾಡಿದೆ. ಕೇಂದ್ರ ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗಿದೆ.

ಈ ಮಧ್ಯೆ ನಗರ ಪ್ರದೇಶಗಳಲ್ಲಿರಬಹುದಾದ ಕಾಲ್ಪನಿಕ ಕಾರ್ಡುಗಳನ್ನು ತೆಗೆದುಹಾಕಲು ಟೊಕನ್ ಪದ್ದತಿಯನ್ನು ಸರ್ಕಾರವು ಜಾರಿಗೆ ತಂದಿದೆ. ಇದುವರೆಗೆ 48.251 ಕಾರ್ಡುಗಳನ್ನು ಗುರುತಿಸಲಾಗಿದೆ. ಮತ್ತು ಇದರಿಂದಾಗಿ 168 ಮೆ. ಟನ್ ಸಕ್ಕರೆ ಮತ್ತು 780 ಕೀ.ಲೀ. ಸೀಮೆಎಣ್ಣೆ ಉಳಿತಾಯವಾಗಿದ್ದು ಇದನ್ನು ಗ್ರಾಮೀಣ ಪ್ರದೇಶಗಳಿಗೆ ಹಂಚಲಾಗಿದೆ. ಕಾಲಾಂತರದಲ್ಲಿ ವ್ಯತ್ಯಾಸವನ್ನು ಕಡಿಮೆ ಮಾಡಿಕೊಳ್ಳಲು ಯೋಚಿಸಲಾಗಿದೆ.